ದಕ್ಷಿಣ ವಲಯದಲ್ಲಿ – 31
ಈವರೆಗೆ ಒಟ್ಟು – 35

ಅ) 27 ಕೆಲಸಗಳನ್ನು 95-96ನೇ ಸಾಲಿನೊಳಗೆ, ಉಳಿದ 8 ಕೆಲಸಗಳನ್ನು ಅನುದಾನದ ಲಭ್ಯತೆಯನ್ನಾಧರಿಸಿ ಮತ್ತು ನ್ಯಾಯಾಲಯದ ತೆರವನ್ನಾಧರಿಸಿ ಪೂರ್ಣಗೊಳಿಸಲಾಗುವುದು.

ಇ) ಈ ಹಂತದಲ್ಲಿ ಅದನ್ನು ನಿಗದಿಪಡಿಸಲು ಬರುವುದಿಲ್ಲ.

ಉಳ್ಳಾಲ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡ ರಸ್ತೆಗಳು

1200 (2017): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲಾಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ಉಳ್ಳಾಲ ಕ್ಷೇತ್ರದಲ್ಲಿ ತೆಗೆದುಕೊಂಡ ರಸ್ತೆಗಳು ಎಷ್ಟು ಕಿಲೋ ಮೀಟರ್; (ಅವುಗಳ ಹೆಸರನ್ನು ತಿಳಿಸುವುದು);

ಆ) ಈ ರಸ್ತೆಗಳು ಭಾರೀ ನಾದುರಸ್ತಿಯಲ್ಲಿರುವುದರಿಂದ ಇವುಗಳ ಡಾಂಬರೀಕರಣ ಯಾವಾಗ ಆರಂಭಿಸಲಾಗುವುದು;

ಇ) ಇದಕ್ಕೆ ಬೇಕಾಗುವ ಹಣದ ಬಿಡುಗಡೆ ಮಾಡಲಾಗಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) 47-50 ಕಿ.ಮೀ. ರಸ್ತೆಗಳ ಹೆಸರು ಕೆಳಕಂಡಂತಿದೆ:–

1.	ಪೆರವನ್ನೂರು, – ಪಾವೂರು ರಸ್ತೆ	9.00 ಕಿ.ಮೀ
2.	ನಾಟ್‌ಕಲ್ – ಮಂಜನಾಡಿ ರಸ್ತೆ	4.50 ಕಿ.ಮೀ
3.	ಪಜೀರ್ – ಅದ್ಯಾರ್ ರಸ್ತೆ	6.00 ಕಿ.ಮೀ.
4.	ಉಚ್ಚಿಲ – ದೇರಲಕಟ್ಟೆ ರಸ್ತೆ	6.20 ಕಿ.ಮೀ.
5.	ಉಳ್ಳಾಲ ಕೋಟೆಯಿಂದ ಉಳ್ಳಾಲ ರೈಲ್ವೆ ಸ್ಟೇಷನ್	2.40 ಕಿ.ಮೀ.
6.	ದೇರಳಕಟ್ಟೆ ಬರುವ ರಸ್ತೆ	3.00 ಕಿ.ಮೀ.
7.	ಫಬೀರ್ (ಪಾವೂರು) ಇನ್ನೋಳಿ ರಸ್ತೆ	5.80 ಕಿ.ಮೀ.
8.	ಉಚ್ಚಿಲ ಕಡವಿನಿಂದ ಉಳ್ಳಾಲ ರೈಲ್ವೆ ಸ್ಟೇಷನ್	2.60 ಕಿ.ಮೀ.
9.	ಪಡೀಲ ಬಜಾರ ಜಪ್ಪಿನ ಮೊಗರು ರಸ್ತೆ	5.00 ಕಿ.ಮೀ.
10.	ಬಂತೂರು ಪೈಜಲ್ ನಗರ ಕಂಕನಾಡಿ ರೈಲ್ವೆ ಸ್ಟೇಷನ್ ರಸ್ತೆ	3.00 ಕಿ.ಮೀ.
		47.50 ಕಿ.ಮೀ.

ಆ) ಮೇಲ್ದರ್ಜೆಗೇರಿಸಿದ ರಸ್ತೆಗಳ ಅಭಿವೃದ್ಧಿಯನ್ನು ಹಂತಹಂತವಾಗಿ 1993-94ರ ಸಾಲಿನಿಂದ ತೆಗೆದುಕೊಳ್ಳಲಾಗುವುದು.

ಇ) 1992-93ನೇ ಸಾಲಿನಲ್ಲಿ ಈ ರಸ್ತೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಆಗಿರುವುದಿಲ್ಲ.

ಟಿ. ನರಸೀಪುರ ಕ್ಷೇತ್ರದಲ್ಲಿ ರಸ್ತೆ ರಿಪೇರಿ

1202 (1579): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):–